ಶ್ರೀ ಆರ್. ರೋಷನ್ ಬೇಗ್ : ಹಾಸನ ಜಿಲ್ಲೆಯಲ್ಲಿ ಈಗ ಇರತಕ್ಕಂಥ ಜಿಲ್ಲಾ ಕಾರಾಗೃಹ 1879ರಲ್ಲಿ ಎರಡು ಎಕರೆ ಹತ್ತೊಂಭತ್ತು ಗುಂಟೆಯಲ್ಲಿ ನಿರ್ಮಾಣ ಆಗಿದೆ. ಅದು ಚಿಕ್ಕದು ಎಂದು ಮನಗಂಡು ಈಗಾಗಲೇ ಸರ್ಕಾರ ಸರ್ವೆ ನಂಬರ್ 88,122ರಲ್ಲಿ, ಸರ್ವೆ ನಂಬರ್ 3ರಲ್ಲಿ ಒಂಭತ್ತು ಎಕರೆ ಏಳು ಗುಂಟೆ ಜಮೀನನ್ನು ಮಂಜೂರಾತಿ ಮಾಡಿ ನಮ್ಮ ಇಲಾಖೆಯವರಿಗೆ ವಹಿಸಿಕೊಟ್ಟಿದ್ದಾರೆ. ಈಗ ಸರ್ಕಾರ ಕೊಟ್ಟಿರತಕ್ಕಂಥ ಭೂಮಿಯ ಮಧ್ಯದಲ್ಲಿ ಖಾಸಗಿ ವ್ಯಕ್ತಿಗಳ ಭೂಮಿ ಐದು ಎಕರೆ ಒಂಭತ್ತು ಗುಂಟೆ ಜಮೀನು ಬಂದಿವುದರಿಂದ ಅದನ್ನು ಈಗಾಗಲೇ ಭೂ ಸ್ವಾಧೀನ ಮಾಡಿಕೊಳ್ಳುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಂಡಿದೆ. ಪ್ರಾಯಶಃ ತಕ್ಷಣದಲ್ಲಿ ಈ ಹಾಸನ ಜಿಲ್ಲಾ ಕಾರಾಗೃಹ ಚಿಕ್ಕದು ಎಂದು ಮನಗಂಡು ಸ್ಥಳಾಂತರಿಸುವ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ. ಈ 9 ಎಕರೆ 7 ಗುಂಟೆ ಮತ್ತು 5 ಎಕರೆ ಒಂಭತ್ತು ಗುಂಟೆ ಒಟ್ಟು 14 ಎಕರೆಯಲ್ಲಿ ಒಂದು ಹೊಸ ಕಾರಾಗೃಹವನ್ನು ಕಟ್ಟುವುದಕ್ಕೆ ಸರ್ಕಾರದ ಮಂಜೂರಾತಿ ದೊರೆತಿದೆ. ಲೋಕೋಪಯೋಗಿ ಇಲಾಖೆ ಭೂ ಸ್ವಾಧೀನ ಪ್ರಕ್ರಿಯೆ ಮಾಡಿ ಕಾರ್ಯಕ್ರಮವನ್ನು ಜರುಗಿಸಿ ನಮ್ಮ ಇಲಾಖೆಗೆ ಕೊಡುತ್ತಾರೆ. ತಕ್ಷಣ ಕಾರಾಗೃಹವನ್ನು ಕಟ್ಟುವುದಕ್ಕೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಬೆಂಗಳೂರಿನಲ್ಲಿ ಒಂದಂಕಿ ಲಾಟರಿ ತಡೆಗಟ್ಟುವುದು

394 - ಶ್ರೀ ಪ್ರಕಾಶ್ ಪಿ.ಎಸ್ (ಚಿಕ್ಕಪೇಟೆ) : ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಮಟ್ಕ ಜೂಜು ಹಾಗೂ ಒಂದಂಕಿ ಲಾಟರಿಯ ಹಾವಳಿ ಪುನಃ ತಲೆಯೆತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದನ್ನು ತಡೆಗಟ್ಟಲು ಕೈಗೊಂಡ ಕ್ರಮ ಏನು?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು) :

ಅ) ಬಂದಿದೆ

ಆ) ಬೆಂಗಳೂರು ನಗರದಲ್ಲಿ ಕೆಲವು ಕ್ಲಬ್ ಮಾಲೀಕರು ರಾಜ್ಯ ಉಚ್ಚ ನ್ಯಾಯಾಲಯದಿಂದ ಪೋಲೀಸರ ದಾಳಿ ಮಾಡದಂತೆ ತಡೆಯಾಜ್ಞೆ ತಂದು ಕ್ಲಬ್‌ಗಳನ್ನು ನಡೆಸುತ್ತಿರುತ್ತಾರೆ. ಆದರೆ ಯಾವುದೇ ರೀತಿಯ ಜೂಜು ನಡೆಯದಂತೆ ನಿಗಾ ವಹಿಸಲಾಗಿದೆ. ಇದರಿಂದ ಜೂಜು ಹಾಗೂ ಮಟ್ಕಾ ಪ್ರಕರಣಗಳು ನಿಯಂತ್ರಣದಲ್ಲಿರುತ್ತದೆ.

ನಗರದಲ್ಲಿ ಒಂದಂಕಿ ಹಾಗೂ ಇನ್‌ಸ್ಟೆಂಟ್ ಲಾಟರಿ ಮಾರಾಟವನ್ನು ಸಂಪೂರ್ಣವಾಗಿ ನಿಷ್ಕೇಧಿಸಿದೆ. ಆದರೆ ಇತ್ತೀಚೆಗೆ ಹಲವು ಏಜೆಂಟರುಗಳು, ಪೊಲೀಸರು ಮಧ್ಯೆ ಪ್ರವೇಶಿಸದಂತೆ ರಾಜ್ಯ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದು, ಅವುಗಳ ಬಗ್ಗೆ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಪರಿಶೀಲನೆ ನಡೆಯುತ್ತಿದೆ.

ಶ್ರೀ ಪಿ.ಎಸ್. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ನೆನ್ನೆ ದಿನ ಈ ಎರಡು ಅಂಕಿಯ ಲಾಟರಿ ಬಗ್ಗೆ ದೀರ್ಘವಾಗಿ ಚರ್ಚೆ ಮಾಡಿದರೂ. ಆಗ ಈ ಜೂಜು, ಮಟ್ಕವನ್ನು ತಡೆಯಲಿಕ್ಕೆ ಪೋಲೀಸರು ಮಧ್ಯ ಪ್ರವೇಶಿಸಬಾರದು ಎಂದು ತಡೆಯಾಜ್ಞೆ ಇದೆ ಎಂದು ಹೇಳಿದರು. ಆದರೆ ಈ ಕ್ಲಬ್ ನಡೆಸುವುದಕ್ಕೆ, ರಿಕ್ರಿಯೇಷನ್ ಕ್ಲಬ್ ನಡೆಸುವುದಕ್ಕೆ ಟೈಮ್ ಇಲ್ಲವೇ? ಅವು ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ನಡೆಯುತ್ತವೆ. ಈ ಮಟ್ಕಾ ಮತ್ತು ಕೋರ್ಟಿಗೆ ಏನು ಸಂಬಂಧ? ಈ ಮಟ್ಕಾವನ್ನು ಎಲ್ಲಾ ಕೊಳೆಗೇರಿಗಳಲ್ಲಿ ನಾವು ಇವೊತ್ತು ನೋಡುತ್ತೇವೆ. ನಾಳೆಯಿಂದ ಈ ಎರಡು ಅಂಕಿಯ ಲಾಟರಿಯನ್ನು ನಾವು ನಾಳೆಯಿಂದ ನಿಷೇಧ ಮಾಡುತ್ತೇವೆ ಎಂದು ಮಾನ್ಯ ಉಪಮುಖ್ಯಮಂತ್ರಿಗಳು ನೆನ್ನೆ ಹೇಳಿದರು. ಆದರೆ ಇವೊತ್ತೂ ಕೂಡ ಸರಿತಾ ಕಾಂಪ್ಲೆಕ್ಸ್‌ನಲ್ಲಿ, ಪ್ಯಾಲೆಸ್ ಕಾರ್ನರ್‌ನಲ್ಲಿ ನಡೆಯುತ್ತಿದೆ. ಒಂದು ಅಂಕಿಯ ಲಾಟರಿ ಎರಡು ಅಂಕಿಯ ಹೆಸರಿನಿಂದ ಇವೊತ್ತಿಗೂ ಕೂಡ ನಡೆಯುತ್ತಿದೆ. ಸರ್ಕಾರ ಅದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತದೆ? ಹಾಗೆ ಇವೊತ್ತೂ ಕೂಡ ಮಣಿಪುರದ ರಾಜ್ಯ ಲಾಟರಿಯ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ.

5.40 ಪಿ.ಎಂ.

17 ಹೆಸರುಗಳಲ್ಲಿ ಅರ್ಧಗಂಟೆಗೆ ಒಂದೊಂದು ಸಾರಿ ನಾವು ಡ್ರಾ ಮಾಡುತ್ತೇವೆಂದು ಹೇಳಿ ಪತ್ರಿಕೆಯಲ್ಲಿ ಕೂಡ ಪ್ರಚಾರ ಕೊಟ್ಟಿದ್ದಾರೆ. ಇದರ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಬಡಜನತೆ ಇದರಿಂದ ಬಹಳ ಹಾಳಾಗುತ್ತಿದ್ದಾರೆ. ನಿನ್ನೆ ಹೇಳಿದರೂ ಕೂಡ ಇವತ್ತು ನಡೆಯುತ್ತಾ ಇದೆ, ಇದು ಪೂರ್ಣವಾಗಿ ನಿಷೇಧವಾಗಿಲ್ಲ. ಪೋಲೀಸ್‌ನವರು ಹೇಳುತ್ತಾರೆ ಅವರು ಕೋರ್ಟಿನಿಂದ ಆಜ್ಞೆಯನ್ನು ತಂದಿದ್ದಾರೆ ನಾವು ಏನು ಮಾಡಲೂ ಬರುವುದಿಲ್ಲ ಎಂದು. ಬೆಳಿಗ್ಗೆ ದೂರವಾಣಿ ಮುಖಾಂತರ ಚಿಕ್ಕಪೇಟೆ ಪೋಲಿಸ್ ಠಾಣೆಗೆ ನಾನು ಫೋನ್ ಮಾಡಿ ಕೇಳಿದ್ದೇನೆ. ಮಾನ್ಯ ಗೃಹ ಸಚಿವರು ಇದರ ಬಗ್ಗೆ ವಿವರಣೆಯನನ್ನು ಕೊಡಬೇಕೆಂದು ಕೇಳುತ್ತೇನೆ.

ಉಪಾಧ್ಯಕ್ಷರು : ನಿನ್ನೆ ಇದರ ಬಗ್ಗೆ ಚರ್ಚೆಯಾಗಿದೆಯಲ್ಲಾ ?

ಶ್ರೀ ಎಸ್. ಸುರೇಶ್ ಕುಮಾರ್ : ನಿನ್ನೆ ಉಪ ಮುಖ್ಯಮಂತ್ರಿಗಳು ಇದರ ಬಗ್ಗೆ ಉತ್ತರ ಕೊಟ್ಟರೂ ಕೂಡ, ಇವತ್ತು ಇಡೀ ಬೆಂಗಳೂರಿನಲ್ಲಿ ರಾಜಾರೋಷವಾಗಿ ಬೆಳಿಗ್ಗೆಯಿಂದ ಇದು ನಡೆಯುತ್ತಾ ಇದೆ. ಪೋಲಿಸ್ ಇಲಾಖೆ ಕೈಯಿಂದ ಈ ಜೂಜ್ ಇನ್‌ಸ್ಟೆಂಟ್ ಲಾಟರಿಯನ್ನು, ಒಂದಂಕಿ ಲಾಟರಿಯ ಹೆಸರಿನಲ್ಲಿ ನಡೆಯುತ್ತಿರುವ ಎರಡಂಕಿ ಲಾಟರಿಗಳನ್ನು ನಿಲ್ಲಿಸಲು ಆಗುತ್ತದೆಯೋ ಇಲ್ಲವೋ? Are you abdicating your responsibility?

ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಉಪಾಧ್ಯಕ್ಷರೆ, ಸದಸ್ಯರಾದ ಮಾನ್ಯ ಪ್ರಕಾಶ್‌ರವರು ಏನು ಹೇಳಿದರು, ಅದರ ಬಗ್ಗೆ ನಾನು ಆಗಲೇ ವರದಿಯಲ್ಲಿ ಹೇಳಿದ್ದೇನೆ. ನಾವು ಸರ್ಕಾರದ ವತಿಯಿಂದ ಒಂದಂಕಿ ಲಾಟರಿಯನ್ನು ಕರ್ನಾಟಕದಲ್ಲಿ ಬ್ಯಾನ್ ಮಾಡಿದ್ದೇವೆ. ಮಟ್ಕಾವಾಗಲಿ, ಅಥವಾ ಒಂದಕಿ ಲಾಟರಿಯನ್ನಾಗಲಿ ಕರ್ನಾಟಕದಲ್ಲಿ ಯಾರೂ ನಡೆಸಲು ಆಗುವುದಿಲ್ಲ, ಆದರೆ ಕೆಲವರು ಹೈಕೋರ್ಟ್‌ಗೆ

ಹೋಗಿ ಆದೇಶವನ್ನು ತೆಗೆದುಕೊಂಡಿದ್ದಾರೆ. ಎನೆಂದರೆ ಪೋಲಿಸ್‌ನವರು ಇವರ ವ್ಯವಹಾರದಲ್ಲಿ ಹಸ್ತಕ್ಷೇಪಮಾಡಬಾರದು ಎಂದು. ನಿನ್ನೆ ನಾನು ಈ ಸದನದಲ್ಲಿ ಇರಲಿಲ್ಲ, ಮಾನ್ಯ ಹಿರಿಯ ಸಚಿವರು ಇದರ ಬಗ್ಗೆ ಎಲ್ಲಾ ಹೇಳಿದ್ದಾರೆ ಎಂದು ಕೇಳಿದೆ. ಉಪಮುಖ್ಯಮಂತ್ರಿಗಳು ಇದರ ಬಗ್ಗೆ ಉತ್ತರವನ್ನು ಕೊಟ್ಟಿದ್ದಾರೆ. ಇದನ್ನು ನಿಲ್ಲಿಸುತ್ತೇವೆಂದು ಹೇಳಿ. ನಾವು ಇವತ್ತು ಮುಖ್ಯಮಂತ್ರಿಗಳು ಮತ್ತು ಕಾನೂನು ಮಂತ್ರಿಗಳ ಜೊತೆ ಇದನ್ನು ಹೇಗೆ ನಿವಾರಿಸಬೇಕೆಂದು ಒಂದು ಮೀಟಿಂಗ್‌ನ್ನು ಮಾಡುತ್ತೇವೆ. 142 ಲೋಕಸಭಾ ಸದಸ್ಯರು ಮಾನ್ಯ ಪ್ರಧಾನಮಂತ್ರಿಗಳಾದ ಗುಜ್ರಾಲ್ ಅವರನ್ನು ಭೇಟಿ ಮಾಡಿದ್ದಾರೆ. ಇಡೀ ದೇಶದಲ್ಲಿ ಈ ಲಾಟರಿಯನ್ನು ಬ್ಯಾನ್ ಮಾಡಬೇಕೆಂದು ಹೇಳಿದ್ದಾರೆ. ಪ್ರಧಾನಮಂತ್ರಿಗಳು ಇದಕ್ಕೆ ಒಂದು ಕಮಿಟಿಯನ್ನು ಸೋಮಪಾಲ್ ಎಂಬ ಲೋಕಸಭಾ ಸದಸ್ಯರ ಅಧ್ಯಕ್ಷತೆಯಲ್ಲಿ ಮಾಡಿದ್ದಾರೆ. ಆ ಕಮಿಟಿಯ ಸಿಟ್ಟಿಂಗ್ಸ್ ಆಗಲೇ ಪ್ರಾರಂಭವಾಗಿದೆ. ಆ ಸಿಟಿಂಗ್ಸ್ ಬಗ್ಗೆ ಸಾಕಷ್ಟು ದೂರದರ್ಶನದಲ್ಲಿ ಪಬ್ಲಿಸಿಟಿ ಕೂಡ ಆಗಿದೆ. ಲಾಟರಿ ಬಗ್ಗೆ ನಿಮ್ಮ ಅಭಿಪ್ರಾಯಗಳು ಏನು ಇವೆ ಅದನ್ನು ಈ ಕಮಿಟಿಗೆ ಕಾನ್‌ಫಿಡೆನ್‌ಷಿಯಲ್ ಆಗಿ ಬರಿಯಿರಿ ಎಂದು ಹೇಳಿದ್ದಾರೆ. ಆ ಕಮಿಟಿ ರಿಪೋರ್ಟ್ ಬಂದು, ಈ ಸೆಂಟ್ರೆಲ್ ಆಕ್ಟ್ ಅಮೆಂಡ್ ಆದರೆ ಆಗ ನಾವು ಇದನ್ನು ಪೂರ್ಣವಾಗಿ ನಿಷೇಧ ಮಾಡಬಹುದು. But before that though we have banned the single digit lottery, but in the name of double digit lottery, they are doing this mischief - ಆ ಲಾಟರಿಯನ್ನು ಆ ಲೀಗಲ್ ಏನಿದೆ ಅದನ್ನು ಎಕ್ಸ್‌ಪ್ಲಾಯಿಟ್ ಮಾಡಿಕೊಂಡು ಕೆಲವರು ಮಾಡುತ್ತಿದ್ದಾರೆ ಅದಕ್ಕೆ ಇವತ್ತು ನಾನು ಕಾನೂನು ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಅವರು ಹೈಕೋರ್ಟ್ ಆರ್ಡರ್ ಬಗ್ಗೆ ಹೇಳಿದರು, ಹೈಕೋರ್ಟಿನಿಂದ ಸ್ಟೇ ಬಂದಿದೆ ಎಂದು. ಮಾನ್ಯ ಕಾನೂನು ಮಂತ್ರಿಗಳು ಇದ್ದಾರೆ. ಅದರಲ್ಲಿ ಇರುವುದು "I direct the respondents not to interfere with the right to carry on business or sale of single digit lottery tickets and other lottery tickets organised by other State Govts. However, if the petitioners indulge in any other illegal activities, it is permissible for the respondents to inspect the premises of activities, it is permissible for the respondents to inspect the premises of petitioners and take appropriate legal action in accordance with the law." ಅವರು ಡ್ರಾಮಾಡುವವರು ಯಾರು ಎಂದು ಗೊತ್ತಿಲ್ಲ, ಡ್ರಾ ಮಾಡುವುದು ಪಬ್ಲಿಷ್ ಆಗುತ್ತಾ ಇಲ್ಲ. The entire thing is illegal.

ಶ್ರೀ ಪಿ.ಎಸ್. ಪ್ರಕಾಶ್ : ಸಬ್ ಏಜೆಂಟ್‌ಗಳು ಬೀದಿಯಲ್ಲಿ ಕಡ್ಲೆಕಾಯಿ ತರಹ ಈ ಲಾಟರಿ ಟಿಕೆಟ್‌ಗಳನ್ನು ಮಾರುತ್ತಿದ್ದಾರೆ ಅದಕ್ಕೇನು ಲೈಸನ್ಸ್ ಇಲ್ಲವೇ? ಈ ಏಜೆಂಟ್‌ಗಳು ಕೋರ್ಟ್‌ನಿಂದ ಸ್ಟೇ ತಂದಿದ್ದಾರೆ, ಸಬ್ ಏಜೆಂಟ್‌ಗಳು ಇವತ್ತು ರೋಡ್-ರೋಡ್‌ಗಳಲ್ಲಿ ಪೈಪೋಟಿಗೆ 20 ಜನರನ್ನು

ಇಟ್ಟುಕೊಂಡು ಕೂಡುತ್ತಾರಲ್ಲಾ ಅದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಾ? ಅದಕ್ಕೆ ಲೈಸನ್ಸ್ ಇಲ್ಲ, ಪೋಲಿಸ್ ಪರ್ಮಿಷನ್ ಇಲ್ಲ, ಪೋಲಿಸ್‌ನವರು ಅವರ ಜೊತೆಯಲ್ಲಿ ಶಾಮೀಲಾಗಿದ್ದಾರೆ. ನಾವು ಶಾಸಕರು ಪೋಲಿಸ್ ಆಯುಕ್ತರನ್ನು ಭೇಟಿಯಾಗಬೇಕೆಂದರೆ ಅವರು ಅಪಾಯಿಂಟ್‌ಮೆಂಟ್ ತೆಗೆದುಕೊಂಡು ಬಂದು ಭೇಟಿಯಾಗಿ ಎಂದು ಹೇಳುತ್ತಾರೆ. ಹೀಗಾದರೆ ನಾವು ಯಾವ ರೀತಿ ಇದನ್ನು ನಿಯಂತ್ರಣ ಮಾಡುವುದು?

ಶ್ರೀ ಆರ್ ರೋಶನ್ ಬೇಗ್ : ಮಾನ್ಯ ಉಪಾಧ್ಯಕ್ಷರೆ, ಆ ತರಹ ಹೇಳಿದ ಪೋಲಿಸ್ ಕಮೀಷನರ್‌ನ್ನು ಮತ್ತು ಶಾಸಕರು ಯಾರು ಇದ್ದಾರೆ ಅವರನ್ನು ಕರೆದು ನಾನು ನನ್ನ ಕಛೇರಿಯಲ್ಲಿ ಒಂದು ಮೀಟಿಂಗ್‌ನ್ನು ಮಾಡುತ್ತೇನೆ.

ಉಪಾಧ್ಯಕ್ಷರು : ಶ್ರೀ ಸದಾನಂದಗೌಡರ ಪರವಾಗಿ ಶ್ರೀ ಕೆ. ಜಯರಾಮಶೆಟ್ಟಿಯವರು ಪ್ರಶ್ನೆಯನ್ನು ಕೇಳಬಹುದು.

ಕಡಬ ವಿದ್ಯುತ್‌ಸಬ್ - ಸ್ಟೇಷನ್

395 - ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪ್ರಸ್ತುತ ಪೂರ್ಣಗೊಂಡ ಕಡಬ ವಿದ್ಯುತ್ ಸ್ಟೇಷನ್ನಿನಿಂದ, ಯಾವ್ಯಾವ ಗ್ರಾಮಗಳಿಗೆ ವಿದ್ಯುತ್ ಸರಬರಾಜು ಮಾಡಲಾಗುವುದು?*

ಆ) *ಪುತ್ತೂರು ಹಾಗೂ ಸುಳ್ಯ ತಾಲ್ಲೂಕಿನ ವಿವಿಧ ಭಾಗಗಳಿಗೆ ವಿದ್ಯುತ್ ಸೌಲಭ್ಯ ನೀಡುವಲ್ಲಿ, ತಾರತಮ್ಯ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಕಡಬ ಸಬ್ ಸ್ಟೇಷನ್ನಿಗೆ ಸಿಬ್ಬಂದಿಗಳ ಕೊರತೆ ಇರುವುದು, ತಾರತಮ್ಯ ನಡೆದಿರುವುದು, ಸರ್ಕಾರದ ಗಮನಕ್ಕೆ ಬಂದಿದ್ದರೆ, ಯಾವಾಗ ಹುದ್ದೆಗಳನ್ನು ಭರ್ತಿ ಮಾಡಲಾಗುವುದು?*

ಶ್ರೀ ಶರಣಪ್ಪ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಪ್ರಸ್ತುತ ಪೂರ್ಣಗೊಂಡ - ಕಡಬ ವಿದ್ಯುತ್ ಸ್ಟೇಷನ್ನಿನಿಂದ ಈ ಕೆಳಕಂಡ ಗ್ರಾಮಗಳಿಗೆ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. (31). ಕಡಬ, ಬಂಟ್ರ ಕುಟ್ಟಪಾಡಿ, ರಂಗಿಲಾಡಿ, ನೂಜಿ ಬಾಲ್ತಲ, ಬಿಳಿನೆಲೆ, ನೆಟ್ಟಣ, ಕೊಂಬೂರು, ಸಿರಿವಾಗಿಲು, ಶಿರಾಡಿ, ಇಡಲಂಪಾಡಿ ಬಲ್ಯ, ಕೊಂಟೂರು ವರಾಬಿ, ಆಲಂಕಾರು, ಕೊಯ್ಲ, ಕೊರಿಂಬಾಲ, ಚಾರ್ವಕ, ಬೊಲ್ವಾಡಿ, ಎಡಮಂಗಿಲ, ಕಿನ್ಯಾ ಕುತಕುಂಜ, ಐವತ್ತೊಕ್ಕಲು, ಬಲ್ಪ, ಪೊಂಬತ್ತಾಡಿ, ಸುಬ್ರಮಣ್ಯ ಶಶಿಲ, ಶಿವಾಜಿ, ಕೊಕ್ಕಡ, ರೆಕ್ಯಾ, ಆರಿಸಿನಮಕ್ಕಿ. (81 ಹಳ್ಳಿಗಳು)

ಆ) ಪುತ್ತೂರು ಮತ್ತು ಸುಳ್ಯ ತಾಲ್ಲೂಕಿನ ವಿವಿಧ ಭಾಗಗಳಿಗೆ ವಿದ್ಯುತ್ ಸೌಲಭ್ಯ ನೀಡುವಲ್ಲಿ, ಯಾವ ತಾರತಮ್ಯವೂ ನಡೆದಿಲ್ಲ. ಸಂಪರ್ಕ ಸಾಧ್ಯತೆಯನ್ನು ನೋಡಿಕೊಂಡು ಮತ್ತು ಮಂಡಳಿಯ ನಿಯಮಾನುಸಾರ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.